**ಭಾರತೀಯ ರಿಸರ್ವ್ ಬ್ಯಾಂಕ್ (ಆರ್ ಬಿ ಐ)**

**ಕರೆನ್ಸಿ ನಿರ್ವಹಣಾ ಮತ್ತು ನಾಗರಿಕ**

**ಸನ್ನದು ಇಲಾಖೆ**

**1. ನಾಗರಿಕ ಸನ್ನದಿನ ಉದ್ದೇಶಗಳು**

ನಾಗರಿಕ ಸನ್ನದು ನೋಟು ಮತ್ತು ನಾಣ್ಯ ವಿನಿಮಯಕ್ಕೆ ಸಂಬಂಧಿಸಿದಂತೆ ಭಾರತೀಯ ರಿಸರ್ವ್ ಬ್ಯಾಂಕ್ ನಿಂದ ವಿವಿಧ ಸೌಲಭ್ಯಗಳ ಮೇಲೆ ನೀಡಲಾಗಿರುವ ಮಾಹಿತಿ ಮತ್ತು ಆರ್ ಬಿ ಐ ಪ್ರಕಟಣಾ ಕಛೇರಿ ಮತ್ತು ವಾಣಿಜ್ಯ ಬ್ಯಾಂಕ್ ಶಾಖೆಗಳಲ್ಲಿ ನೀಡಲಾಗಿರುವ ಸೇವೆಗಳ ಸಾಮಾನ್ಯ ಮಾನದಂಡಗಳನ್ನು ಹೊಂದಿದೆ.

**2. ಆರ್ ಬಿ ಐ ಪ್ರಕಟಣಾ ಕಛೇರಿಯಲ್ಲಿ ಲಭ್ಯವಿರುವ ಸೇವೆಗಳು**

ಪ್ರಕಟಣಾ ಇಲಾಖೆಯು ಕಾರ್ಯನಿರ್ವಹಿಸುವ ಆರ್ ಬಿ ಐ ಕಛೇರಿಗಳು, ಸಾರ್ವಜನಿಕ ಸದಸ್ಯರಿಗೆ ಚಾಲ್ತಿಯಲ್ಲಿಲ್ಲದ ಅಥವಾ ಹರಿದ ನೋಟುಗಳನ್ನೂ ಒಳಗೊಂಡಂತೆ ತುಂಡಾದ ಮತ್ತು ಹಳೆಯ ನೋಟು ಮತ್ತು ನಾಣ್ಯಗಳನ್ನು ವಿನಿಮಯ ಮಾಡುವ ಸೌಲಭ್ಯವನ್ನು ನೀಡಿದೆ. ಬ್ಯಾಂಕ್ ತನ್ನ ಕೌಂಟರ್ ಗಳಲ್ಲಿ ಉಚಿತವಾಗಿ ಕೆಲಸದ ಅವಧಿಯಲ್ಲಿ ವಿನಿಮಯ ಸೌಲಭ್ಯವನ್ನು ನೀಡಲು ಬದ್ಧವಾಗಿರುತ್ತದೆ.

**3. ವಿನಿಮಯ ಸೇವೆಯನ್ನು ನೀಡುವ ಆರ್ ಬಿ ಐ ಕಛೇರಿಗಳ ಹೆಸರುಗಳು**

ಸೌಲಭ್ಯವನ್ನು ಅಹ್ಮದಾಬಾದ್, ಬೆಂಗಳೂರು, ಬೇಲಾಪುರ (ನವ ಮುಂಬೈ), ಭೂಪಾಲ್, ಭುವನೇಶ್ವರ್, ಚಂಡೀಘರ್, ಚೆನ್ನೈ, ಗುವಾಹಟಿ, ಹೈದರಾಬಾದ್, ಜೈಪುರ, ಜಮ್ಮು, ಕಾನ್ಪುರ, ಕೊಚ್ಚಿ, ಕೊಲ್ಕತ್ತಾ, ಲಕ್ನೋ, ಮುಂಬೈ, ನಾಗಪುರ, ನವದೆಹಲಿ, ಪಾಟ್ನಾ ಮತ್ತು ತಿರುವನಂತಪುರಂ ನಲ್ಲಿರುವ ಬ್ಯಾಂಕ್ ನ ಪ್ರಾದೇಶಿಕ ಕಛೇರಿಗಳ ಕೌಂಟರ್ ಗಳಲ್ಲಿ ನೀಡಲಾಗುತ್ತದೆ.

**4. ನಾಣ್ಯ ವಿನಿಯೋಗದ ನೆರವಿನಿಂದ ನೋಟುಗಳನ್ನು ನಾಣ್ಯವಾಗಿ ವಿನಿಮಯ ಮಾಡುವುದು**

ಸಾಮಾನ್ಯ ಸಾರ್ವಜನಿಕ ಸದಸ್ಯರೂ ಸಹ ಭಾರತೀಯ ರಿಸರ್ವ್ ಬ್ಯಾಂಕ್ ನ ಪ್ರಾದೇಶಿಕ ಕಛೇರಿಗಳ ಬ್ಯಾಂಕಿಂಗ್ ಹಾಲ್ ಗಳಲ್ಲಿ ಅಳವಡಿಸಿರುವ ನಾಣ್ಯ ವಿನಿಯೋಗವನ್ನು ಬಳಸಿ ತಮ್ಮ ನೋಟುಗಳನ್ನು ವಿನಿಮಯ ಮಾಡಿಕೊಳ್ಳಬಹುದು.

**5. ಹರಿದ ಮತ್ತು ಹಳೆಯದಾದ ನೋಟು ಮತ್ತು ನಾಣ್ಯಗಳನ್ನು ಬ್ಯಾಂಕ್ ನ ಸಾರ್ವಜನಿಕ ಕೌಂಟರ್ ಗಳಲ್ಲಿ ವಿನಿಮಯ ಮಾಡುವುದು**

ಸಾಮಾನ್ಯ ಸಾರ್ವಜನಿಕ ಸದಸ್ಯರು ಬ್ಯಾಂಕ್ ಕಛೇರಿಗಳ ಕೌಂಟರ್ ಗಳಲ್ಲಿ ಕೆಳಗಿನ ಸೌಲಭ್ಯಗಳನ್ನು ಪಡೆಯಬಹುದು.

(a) ಹರಿದ ನೋಟುಗಳ ವಿನಿಮಯ. ಕೊರತೆಯಿರುವ ಅಥವಾ ಹಳೆಯದಾಗಿ ಅತ್ಯಂತ ಸಣ್ಣದಾಗಿ ಕತ್ತರಿಸಿದ ಅಥವಾ ಎಣ್ಣೆ, ಬಣ್ಣ, ಶಾಯಿ ಇತ್ಯಾದಿಗಳಿಂದ ಅಸ್ಪಷ್ಟವಾಗಿರುವ ನೋಟುಗಳನ್ನು ಹರಿದ ನೋಟುಗಳೆಂದು ಪರಿಗಣಿಸಲಾಗುತ್ತದೆ. ಸುಲಭ ವಿನಿಮಯವನ್ನು ನೀಡಲು, ಲಂಬವಾಗಿ ಅಥವಾ ಸಂಖ್ಯೆಯು ಸ್ಪಷ್ಟವಾಗಿಲ್ಲದ ಮಧ್ಯದಲ್ಲಿ ಭಾಗವಾಗಿರುವ ನೋಟುಗಳನ್ನು ಸಹ ಹರಿದ ನೋಟುಗಳೆಂದು ಪರಿಗಣಿಸಲಾಗುತ್ತದೆ. ರಾಜಕೀಯ ಅಥವಾ ಧಾರ್ಮಿಕ ವಾಕ್ಯಗಳನ್ನು ಬರೆದಿರುವ ನೋಟುಗಳನ್ನು ಯಾವುದೇ ಕಾರಣಕ್ಕೂ ವಿನಿಮಯ ಮಾಡಲಾಗುವುದಿಲ್ಲ.

(b) ಹಳೆಯದಾದ ನೋಟುಗಳ ವಿನಿಮಯ. ಹಳೆಯದಾದ ನೋಟುಗಳೆಂದರೆ ನೋಟಿನ ಒಂದು ಭಾಗ ಕಳೆದುಹೋಗಿರುವ ಅಥವಾ ತುಣುಕುಗಳನ್ನು ಹೊಂದಿರುವ ನೋಟುಗಳು, ಅರ್ಧಕ್ಕಿಂತ ಕಡಿಮೆ ಇಲ್ಲದ ನೋಟುಗಳನ್ನು ಮಾತ್ರ ನೀಡಬೇಕಾಗಿದ್ದು, ನೋಟುಗಳ ತುಣುಕನ್ನು ಒಟ್ಟಾಗಿ ಸೇರಿಸಿದ್ದು ಪ್ರತಿಯೊಂದು ತುಣುಕಿನ ಮೇಲೆ, "ಸೂಚಿತ ಅಧಿಕಾರಿ' [ಆರ್ ಬಿ ಐ ನಿಂದ ವ್ಯಾಖ್ಯಾನಿಸಲ್ಪಟ್ಟಂತೆ (ನೋಟು ಮರಳಿಸುವಿಕೆ) ನಿಯಮ] ಎಂದು ಅದೇ ನೋಟಿನ ಮೇಲೆ ಗುರುತಿಸುವಂತಿರಬೇಕು.

ಆರ್ ಬಿ ಐ (ನೋಟು ಮರಳಿಸುವಿಕೆ) ನಿಯಮ, 1975 (1980 ರವರೆಗೂ ತಿದ್ದುಪಡಿ ಮಾಡಿದಂತೆ) ಆರ್ ಬಿ ಐ ನ ವೆಬ್ ಸೈಟ್ http://www.rbi.org.in ನಲ್ಲಿ "ಪ್ರಕಟಣೆ" ಎನ್ನುವ ಶೀರ್ಷಿಕೆ ಮತ್ತು ಉಪ-ಶೀರ್ಷಿಕೆ "ಸಾಂದರ್ಭಿಕ ಪ್ರಕತಣೆಗಳು" ಎನ್ನುವ ಅಡಿಯಲ್ಲಿ ನೀಡಲಾಗಿದೆ.

(c) ನಾಣ್ಯಗಳ ವಿನಿಮಯವು ಚಾಲ್ತಿಯಲ್ಲಿಲ್ಲದ ನೋಟು ಅಥವಾ ನಾಣ್ಯಗಳನ್ನು ಒಳಗೊಂಡಿದೆ.

**6. ಹರಿದ/ ಕತ್ತರಿಸಿದ ನೋಟುಗಳನ್ನು ಟ್ರಿಪಲ್ ಲಾಕ್ ರಿಸೆಪ್ಟೆಕಲ್ ಅಥವಾ ಅಂಚೆಯ ಮೂಲಕ ವಿನಿಮಯಕ್ಕೆ ಸ್ವೀಕರಿಸಲಾಗುತ್ತದೆ**

ತಮ್ಮ ಹಳೆಯ / ಕತ್ತರಿಸಿದ ನೋಟುಗಳನ್ನು ನೀಡಲು ಬ್ಯಾಂಕ್ ನ ಕೌಂಟರ್ ಗಳಲ್ಲಿ ದೀರ್ಘಕಾಲ ಕಾಯಲಾಗದ ಸಾರ್ವಜನಿಕ ಸದಸ್ಯರಿಗೆ ನೋಟು ವಿನಿಮಯ ಸೌಲಭ್ಯವನ್ನು ನೀಡಲು, ತಮ್ಮ ಹರಿದ/ಕತ್ತರಿಸಿದ ನೋಟುಗಳನ್ನು ಜಮೆ ಮಾಡಲು ಬ್ಯಾಂಕ್ ನ ಕಛೇರಿಗಳು "ಟ್ರಿಪಲ್ ಲಾಕ್ ರಿಸೆಪ್ಟೆಕಲ್" (ಟಿಎಲ್ಆರ್) ಎನ್ನುವ ಬೀಗಮುದ್ರೆಯುಳ್ಳ ಪೆಟ್ಟಿಗೆಯ ಸೌಲಭ್ಯವನ್ನು ನೀಡಲಾಗಿದೆ. ಟಿ ಎಲ್ ಆರ್ ಪೆಟ್ಟಿಗೆಯನ್ನು ನಿರ್ದಿಷ್ಟ ಕೌಂಟರ್ ನ ಹತ್ತಿರ ಸಂಪೂರ್ಣ ಮುಚ್ಚಲಾದ ಪೆಟ್ಟಿಗೆಯಲ್ಲಿ ನೋಟುಗಳನ್ನು ಹಾಕಲಾಗುತ್ತದೆಮ್ ಇದನ್ನು ಪರಿಶೀಲನಾ ಕೌಂಟರ್ ನಿಂದ ಪಡೆಯಬಹುದು. ನೋಟು ನೀಡುವವರು ಅವರಿಂದ ನೀಡಲ್ಪಡುವ ನೋಟಿನ ವಿವರ, ವಿಳಾಸ ಮತ್ತು ಬ್ಯಾಂಕ್ ಖಾತೆ ಸಂಖ್ಯೆಯನ್ನು ಕವರ್ ನ ಮೇಲೆ ಬರೆಯಬೇಕು. ಸಾರ್ವಜನಿಕ ಸದಸ್ಯರು ಸಹ ಆರ್ ಬಿ ಐ ಕಛೇರಿಗೆ ನೋಂದಾಯಿತ ಮತ್ತು ಇನ್ಶೂರ್ಡ್ ಅಂಚೆಯ ಮೂಲಕ ಹರಿದ ಮತ್ತು ಹಳೆಯ ನೋಟುಗಳನ್ನು ಕಳುಹಿಸಬಹುದು. ನೋಟುಗಳ ವಿನಿಮಯ ಮೌಲ್ಯವನ್ನು ನೋಟು ಮರಳಿಸುವ ನಿಯಮದ ಅಡಿಯಲ್ಲಿ ಪಾವತಿಸಲಾಗುತ್ತದೆ, ಹಾಗೂ ಇದನ್ನು ವಿದ್ಯುತ್ ತೀರುವಳಿ ಸೇವೆ / ವಿದ್ಯುತ್ ಫಂಡ್ ವರ್ಗಾವಣೆ (ಇ ಎಫ್ ಟಿ) ಸೌಲಭ್ಯದ ಮೂಲಕ ಉಚಿತವಾಗಿ ಬ್ಯಾಂಕ್ ಖಾತೆಗೆ ಜಮೆ ಮಾಡಲಾಗುತ್ತದೆ. ನೋಟು ನೀಡುವ ವ್ಯಕ್ತಿ ಬ್ಯಾಂಕ್ ಖಾತೆಯನ್ನು ಹೊಂದಿರದಿದ್ದರೆ, ಅಥವಾ ಆತ ವಾಸಿಸಿರುವ ಪ್ರದೇಶದಲ್ಲಿ ತೀರುವಳಿ ಸೇವೆ / ಇ ಎಫ್ ಟಿ ಯ ಸೌಲಭ್ಯವಿಲ್ಲದಿದ್ದರೆ, ವಿನಿಮಯ ಮೌಲ್ಯವನ್ನು ಬ್ಯಾಂಕ್ ಡ್ರಾಫ್ಟ್ / ಮನಿ ಆರ್ಡರ್ ನ ಮೂಲಕ ವಿನಿಮಯದಾರನ ವೆಚ್ಚದಲ್ಲಿ ನೀಡಲಾಗುತ್ತದೆ. ಟಿ ಎಲ್ ಆರ್ ಸೌಲಭ್ಯವನ್ನು ಕೇವಲ ಹರಿದ / ಕತ್ತರಿಸಿದ ನೋಟುಗಳಿಗೆ ಮಾತ್ರ ನೀಡಲಾಗುತ್ತದೆ ಹಾಗೂ ಇದನ್ನು ಹಳೆಯ ನೋಟುಗಳಿಗೆ ನೀಡಲಾಗುವುದಿಲ್ಲ.

**7. ಸೇವೆಯ ಸಾಮಾನ್ಯ ನಿಯಮಗಳು**

(i) ಬ್ಯಾಂಕ್ ಕೌಂಟರ್ ನ ಮೇಲಿನ ವಿನಿಮಯ ಸೌಲಭ್ಯವು ಸಂಬಂಧಿಸಿದ ಪ್ರಾದೇಶಿಕ ಕಛೇರಿಯ ಕೆಲಸದ ವೇಳೆಯಲ್ಲಿ ಹಾಗೂ ಉಚಿತವಾಗಿ ಲಭ್ಯವಿರುತ್ತದೆ.

(ii) ಪ್ರತಿಯೊಂದು ಕಛೇರಿಯಲ್ಲಿ ಲಭ್ಯವಿರುವಂತೆ ಮಾಡಿರುವ ಕೌಂಟರ್ ಗಳ ಸರಣಿ ಸಂಖ್ಯೆಗಳನ್ನು ಬ್ಯಾಂಕ್ ನ ಪ್ರತಿಯೊಂದು ಕಛೇರಿಯಲ್ಲಿನ ಬ್ಯಾಂಕಿಂಗ್ ಹಾಲ್ ನಲ್ಲಿ ಪ್ರದರ್ಶಿಸಿರಲಾಗುತ್ತದೆ.

(iii) ಮುಚ್ಚಿದ ಕವರ್ ಗಳಲ್ಲಿರುವ ಹರಿದ / ಕತ್ತರಿಸಿದ ನೋಟುಗಳನ್ನು ಸಾಮಾನ್ಯ ಕೆಲಸದ ವೇಳೆಯು ಮುಕ್ತಾಯವಾದ ಒಂದು ಗಂಟೆಯ ನಂತರ ಟ್ರಿಪಲ್ ಲಾಕ್ ರಿಸೆಪ್ಟಕಲ್ ನಲ್ಲಿ ಸ್ವೀಕರಿಸಲಾಗುತ್ತದೆ.

(iv) ಹರಿದ / ಕತ್ತರಿಸಿದ ನೋಟುಗಳನ್ನು ಭಾರತೀಯ ರಿಸರ್ವ್ ಬ್ಯಾಂಕ್ ನ (ನೋಟು ಮರಳಿಸುವಿಕೆ) ನಿಯಮದ ಅಡಿಯಲ್ಲಿ ಬ್ಯಾಂಕ್ ಗಳು ವಿನಿಮಯ ಮಾಡಿಕೊಳ್ಳುತ್ತವೆ. ಹರಿದ / ಕತ್ತರಿಸಿದ ನೋಟುಗಳನ್ನು ನಿಯಮಗಳ ಅಡಿಯಲ್ಲಿ ಪಾವತಿಸುವಂತಿಲ್ಲ ಎಂದು ಕಂಡುಬಂದಲ್ಲಿ, ಅದನ್ನು ತಿರಸ್ಕರಿಸಿ, ತಿರಸ್ಕರಣೆಗೆ ಕಾರಣವನ್ನು ವಿನಿಮಯದಾರನಿಗೆ ನೀಡಬೇಕು. ತಿರಸ್ಕರಿಸಿದ ನೋಟು ಬ್ಯಾಂಕ್ ನಲ್ಲಿ ಉಳಿದು, ಅದನ್ನು ನಾಲ್ಕು ತಿಂಗಳ ನಂತರ ನಾಶಪಡಿಸಬೇಕು.

(v) ನಕಲು/ ಖೋಟಾ ನೋಟು / ನಾಣ್ಯ ಕಂಡುಬಂದಲ್ಲಿ, ಅದನ್ನು ಮುಟ್ಟುಗೋಲು ಹಾಕಿಕೊಳ್ಳಬೇಕು, ಹಾಗೂ ಇದಕ್ಕೆ ಯಾವುದೇ ಮೌಲ್ಯವನ್ನು ನೀಡುವಂತಿಲ್ಲ. ಇಂತಹ ನೋಟು/ನಾಣ್ಯಗಳನ್ನು ನೀಡಿದ ವ್ಯಕ್ತಿಗೆ

ಸಲಹೆ ನೀಡಿದ ನಂತರ ಬ್ಯಾಂಕ್ ತನ್ನಲ್ಲಿಯೇ ಇರಿಸಿಕೊಳ್ಳುತ್ತದೆ.

(vi) ಆರ್ ಬಿ ಐ ನಿಂದ ನೀಡಲ್ಪಟ್ಟ ಬ್ಯಾಂಕ್ ನೋಟುಗಳ ಸುರಕ್ಷಾ ಲಕ್ಷಣಗಳನ್ನು ಬ್ಯಾಂಕ್ ನ ವೆಬ್ ಸೈಟ್ http://www.rbi.org.in/currency/banknotes.html ನಲ್ಲಿ ಸಾರ್ವಜನಿಕ ಸದಸ್ಯರಿಗೆ ತಿಳಿಸಲಾಗಿದೆ.

(vii) ಯಾವುದೇ ಸಾರ್ವಜನಿಕ ಸದಸ್ಯ ಯಾವುದೇ ಆರ್ ಬಿ ಐ ಕಛೇರಿಯಲ್ಲಿ ವಿನಿಮಯ ಸೌಲಭ್ಯ ಪಡೆಯಲು ಸಮಸ್ಯೆಗಳನ್ನು ಎದುರಿಸಿದರೆ, ಅಥವಾ ಲಂಚವನ್ನು ಕೇಳಿದರೆ, ತ ಪ್ರಾದೇಶಿಕ ಕಛೇರಿಯಲ್ಲಿನ ಪರಿಶೀಲನಾ ಕೌಂಟರ್ ನ ಬಳಿ ಇರುವ ದೂರು ಪುಸ್ತಕ / ನೋಂದಣಿ ಪುಸ್ತಕದಲ್ಲಿ ದೂರು ದಾಖಲಿಸಬಹುದು ಅಥವಾ ಅದನ್ನು ಸಂಬಂಧಿಸಿದ ಆರ್ ಬಿ ಐ ಕಛೇರಿಯ ಪ್ರಕಟಣಾ ಇಲಾಖೆಯ ಅಧಿಕಾರಿಗಳ ಗಮನಕ್ಕೆ ತರಬೇಕು. ಅನುಬಂಧದಲ್ಲಿ ಅಧಿಕಾರಿಯ ಹುದ್ದೆ ಮತ್ತು ವಿಳಾಸಗಳನ್ನು ನೀಡಲಾಗಿದೆ.

(xiv) ಭಾರತೀಯ ರಿಸರ್ವ್ ಬ್ಯಾಂಕ್ ನ ಸಿಬ್ಬಂದಿ ಮತ್ತು ಅಧಿಕಾರಿಗಳು ಪ್ರತಿಯೊಬ್ಬ ಸಾರ್ವಜನಿಕ ಸದಸ್ಯರನ್ನೂ ನಮ್ರತೆ ಮತ್ತು ಪ್ರಮುಖವಾಗಿ ಪರಿಗಣಿಸಬೇಕು. ಸಿಬ್ಬಂದಿಯು ಸಹಾಯ ಹಸ್ತ ನೀಡುವವರಾಗಿದ್ದು, ಗ್ರಾಹಕರ ಪರಿಶೀಲನೆ ಮತ್ತು ದೂರುಗಳಿಗೆ ಪ್ರಾಮಾಣಿಕವಾಗಿ ಪ್ರತಿಕ್ರಿಯಿಸುತ್ತಾರೆ.

**8. ಹರಿದ ಮತ್ತು ಹಳೆಯ ನೋಟು ಮತ್ತು ನಾಣ್ಯಗಳನ್ನು ವಾಣಿಜ್ಯ ಬ್ಯಾಂಕ್ ಗಳ ಕೌಂಟರ್ ಗಳಲ್ಲಿ ವಿನಿಮಯ ಮಾಡುವುದು**

(i) ಭಾರತೀಯ ರಿಸರ್ವ್ ಬ್ಯಾಂಕ್ ನ ಕಛೇರಿಗಳು ಆಯ್ದ ಕೇಂದ್ರಗಳಲ್ಲಿ ಲಭ್ಯವಿದೆ. ಆದ್ದರಿಂದ, ಬ್ಯಾಂಕ್ ಹರಿದ ನೋಟುಗಳು, ನೋಟುಗಳಿಂದ ನಾಣ್ಯಗಳಿಗೆ ವಿನಿಮಯ ಮತ್ತು ನಾಣ್ಯಗಳನ್ನು ನೋಟಿಗೆ ವಿನಿಮಯ ಮಾಡುವ ಸೌಲಭ್ಯವನ್ನು ನಿಗದಿತ ವಾಣಿಜ್ಯ ಬ್ಯಾಂಕ್ ಗಳ ಶಾಖೆಗಳಲ್ಲಿ ನೀಡಿದೆ. ಹರಿದ ನೋಟುಗಳ ವಿನಿಮಯ ಸೌಲಭ್ಯವು ಎಲ್ಲಾ ಸಾರ್ವಜನಿಕ ವಲಯದ ಬ್ಯಾಂಕ್ ಗಳಲ್ಲಿ ಲಭ್ಯವಿದೆ ಮತ್ತು ಖಾಸಗಿ ವಲಯದ ಬ್ಯಾಂಕ್ ಗಳ ಕರೆನ್ಸಿ ನಗದು ಶಾಖೆಗಳಲ್ಲಿ ಲಭ್ಯವಿದೆ, ಹರಿದ / ಕತ್ತರಿಸಿದ ನೋಟುಗಳ ವಿನಿಮಯವು ಕೇವಲ ವಾಣಿಜ್ಯ ಬ್ಯಾಂಕ್ ಗಳ ನಗದು ಚೆಸ್ಟ್ ಶಾಖೆಗಳಲ್ಲಿ ಮಾತ್ರ ಲಭ್ಯವಿದೆ. ಹರಿದ ನೋಟುಗಳನ್ನು ವಿನಿಮಯ ಮಾಡಿಕೊಳ್ಳುವ ಕರೆನ್ಸಿ ಚೆಸ್ಟ್ ಶಾಖೆಗಳ ಪಟ್ಟಿಯು ಆರ್ ಬಿ ಐ ಕಛೇರಿಯ ಪರಿಶೀಲನಾ ಕೌಂಟರ್ ನಲ್ಲಿ ಲಭ್ಯವಿದೆ. ಇಂತಹ ಕರೆನ್ಸಿ ಚೆಸ್ಟ್ ಶಾಖೆಗಳು ಹರಿದ ನೋಟುಗಳ ವಿನಿಮಯ ಸೌಲಭ್ಯ ಲಭ್ಯವಿದೆ ಎಂದು ಸೂಚನಾ ಫಲಕದಲ್ಲಿ ಹೊಂದಿರುತ್ತದೆ. ಯಾವುದೇ ಶಾಖೆಯು ವಿನಿಮಯ ಸೌಲಭ್ಯವನ್ನು ನೀಡುವುದಿಲ್ಲ ಎಂದು ತಿರಸ್ಕರಿಸಿದಲ್ಲಿ, ಸಾರ್ವಜನಿಕ ಸದಸ್ಯನು ಸಂಬಂಧಪಟ್ಟ ವಾಣಿಜ್ಯ ಬ್ಯಾಂಕ್ ನ ವ್ಯವಸ್ಥಾಪಕ ನಿರ್ದೇಶಕ / ಸಿ ಇ ಒ ಗೆ ದೂರು ಸಲ್ಲಿಸಬಹುದು. ದೂರನ್ನು ಪರಿಗಣಿಸದಿದ್ದಲ್ಲಿ, ವಿಷಯವನ್ನು ಭಾರತೀಯ ರಿಸರ್ವ್ ಬ್ಯಾಂಕ್ ನ ಸಂಬಂಧಪಟ್ಟ ಪ್ರಾದೇಶಿಕ ಕಛೇರಿಯ ಗಮನಕ್ಕೆ ತರಬೇಕು.

(ii) ಇತರ ಬ್ಯಾಂಕ್ ನ ಶಾಖೆಗಳಾದ ಸಹಕಾರ ಬ್ಯಾಂಕ್ ಮತ್ತು ಪ್ರಾದೇಶಿಕ ಗ್ರಾಮೀಣ ಬ್ಯಾಂಕ್ ಗಳು ತಮ್ಮ ಅನುಕೂಲಕ್ಕೆ ಸೂಕ್ತವಾಗುವಂತೆ ನೋಟು ಮತ್ತು ನಾಣ್ಯಗಳನ್ನು ವಿನಿಮಯ ಮಾಡಿಕೊಳ್ಳುತ್ತವೆ. ಅದಾಗ್ಯೂ, ಇವು ಹರಿದ ನೋಟುಗಳನ್ನು ವಿನಿಮಯ ಮಾಡಿಕೊಳ್ಳುವ ಅಧಿಕಾರವನ್ನು ಹೊಂದಿಲ್ಲ.

**9. ಸಲಹೆಗಳು/ ವಿವರಣೆ**

ಯಾವುದೇ ಸಾರ್ವಜನಿಕ ಸದಸ್ಯ ನಾಗರಿಕ ಸನ್ನದಿನ ಕುರಿತಾಗಿ ಯಾವುದೇ ಸಲಹೆ/ ವಿವರಣೆಯನ್ನು ಹೊಂದಿದ್ದಲ್ಲಿ, ಆತ ಅದನ್ನು ಮುಖ್ಯ ವ್ಯವಸ್ಥಾಪಕ, ಕರೆನ್ಸಿ ನಿರ್ವಹಣಾ ಇಲಾಖೆ, ಭಾರತೀಯ ರಿಸರ್ವ್ ಬ್ಯಾಂಕ್, ಕೇಂದ್ರ ಕಛೇರಿ, ಶಹೀದ್ ಭಗತ್ ಸಿಂಗ್ ಮಾರ್ಗ, ಮುಂಬೈ – 400 001 ಗೆ ಬರೆಯಬೇಕು.

**ಅನುಬಂಧ**

**ಆರ್ ಬಿ ಐ ಪ್ರಕಟಣಾ ಕಛೇರಿ ಮತ್ತು ಅದರ ವ್ಯಾಪ್ತಿಯ ವಿಳಾಸ**

| **ಕ್ರ. ಸಂ.** | **ಆರ್ ಬಿ ಐ ಕಛೇರಿಗಳ ಸಂ. ಹೆಸರು ಮತ್ತು ವಿಳಾಸ** | **ವ್ಯಾಪ್ತಿ** |
|---|---|---|
| 1 | ವ್ಯವಸ್ಥಾಪಕ<br>ಭಾರತೀಯ ರಿಸರ್ವ್ ಬ್ಯಾಂಕ್, ಪ್ರಕಟಣಾ ವಿಭಾಗ,<br>2 ನೆಯ ಮಹಡಿ, ಗಾಂಧಿ ಸೇತುವೆ ಹತ್ತಿರ, ಅಹ್ಮದಾಬಾದ್ 380014. | ಗುಜರಾತ್ ರಾಜ್ಯ ಹಾಗೂ ದಾದ್ರಾ ಮತ್ತು ನಗರ್ ಹವೇಲಿ ಮತ್ತು ಡಾಮನ್ ಮತ್ತು ದಿಯು ಕೇಂದ್ರಾಡಳಿತ ಪ್ರದೇಶ |
| 2 | ವ್ಯವಸ್ಥಾಪಕ<br>ಭಾರತೀಯ ರಿಸರ್ವ್ ಬ್ಯಾಂಕ್ ಪ್ರಕಟಣಾ ಇಲಾಖೆ<br>10/3/8, ನೃಪತುಂಗ ರಸ್ತೆ, ಬೆಂಗಳೂರು -560001. | ಕರ್ನಾಟಕ ರಾಜ್ಯ |
| 3 | ಉಪ-ವ್ಯವಸ್ಥಾಪಕ ನಿರ್ದೇಶಕ<br>ಭಾರತೀಯ ರಿಸರ್ವ್ ಬ್ಯಾಂಕ್, ಪ್ರಕಟಣಾ ಇಲಾಖೆ,<br>ಪಂಡಿತ್ ಜವಾಹರ್ ಲಾಲ್ ನೆಹರು ರಸ್ತೆ, ಅಂಚೆ ಪೆಟ್ಟಿಗೆ ಸಂ. 16<br>ಭುವನೇಶ್ವರ – 751 001 | ಒಡಿಶಾ ರಾಜ್ಯ. |
| 4 | ವ್ಯವಸ್ಥಾಪಕ<br>ಭಾರತೀಯ ರಿಸರ್ವ್ ಬ್ಯಾಂಕ್, ಪ್ರಕಟಣಾ ಇಲಾಖೆ, ಮುಖ್ಯ ಕಟ್ಟಡ, ಶಹೀದ್ ಭಗತ್ ಸಿಂಗ್ ಮಾರ್ಗ, ಕೋಟೆ,<br>ಮುಂಬೈ – 400 001 | ಗ್ರೇಟರ್ ಮುಂಬೈ ಎಂದರೆ ಮುಂಬೈ ದ್ವೀಪ ಮತ್ತು ಸಬರ್ಬನ್ ಜಿಲ್ಲೆ (ಕ್ರಮವಾಗಿ ದಹೀಸರ್ ಮತ್ತು ಮುಲುಂದ್ ಅನ್ನು ಪಶ್ಚಿಮ ಮತ್ತು ಕೇಂದ್ರ ರೈಲ್ವೇಯನ್ನು ಸಂಪರ್ಕಿಸುವ ರಸ್ತೆಯ ದಕ್ಷಿಣ) |
| 5 | ಉಪ- ವ್ಯವಸ್ಥಾಪಕ<br>ಭಾರತೀಯ ರಿಸರ್ವ್ ಬ್ಯಾಂಕ್, ಪ್ರಕಟಣಾ ಇಲಾಖೆ,<br>ಹೋಷಂಗಾಬಾದ್ ರಸ್ತೆ, ಅಂಚೆ ಪೆಟ್ಟಿಗೆ ಸಂಖ್ಯೆ, 32, ಭೂಪಾಲ್ 462 001. | ಮಧ್ಯಪ್ರದೇಶ ರಾಜ್ಯ |
| 6 | ಉಪ- ವ್ಯವಸ್ಥಾಪಕ<br>ಭಾರತೀಯ ರಿಸರ್ವ್ ಬ್ಯಾಂಕ್, ಪ್ರಕಟಣಾ ಇಲಾಖೆ, ಪ್ಲಾಟ್ ಸಂ. 3,<br>ಸೆಕ್ಟರ್ 10, ಹೆಚ್. ಹೆಚ್. ನಿರ್ಮಲಾ ದೇವಿ ಮಾರ್ಗ, ಸಿಬಿಡಿ, ಬೇಲಾಪುರ, ನವ ಮುಂಬೈ -400 614 | ಮಹಾರಾಷ್ಟ್ರ ಮತ್ತು ಗೋವಾ ರಾಜ್ಯದ ಅಹ್ಮದ್ ನಗರ, ಕೊಲ್ಹಾಪುರ, ನಾಸಿಕ್, ಪುಣೆ, ರಾಯಘಡ, ರತ್ನಗಿರಿ, ಸಾಂಗ್ಲಿ, ಸತಾರಾ, ಸಿಂಧೂದುರ್ಗ, ಸೋಲಾಪುರ ಮತ್ತು ಥಾಣೆ |
| 7 | ಉಪ-ವ್ಯವಸ್ಥಾಪಕ<br>ಭಾರತೀಯ ರಿಸರ್ವ್ ಬ್ಯಾಂಕ್, ಪ್ರಕಟಣಾ ಇಲಾಖೆ<br>ಕೇಂದ್ರ ವಿಸ್ತಾ, ದೂರವಾಣಿ ಭವನದ ಎದುರು<br>ವಲಯ 17, ಚಂಡೀಘರ್ -160 017. | ಹರಿಯಾಣ, ಹಿಮಾಚಲ ಪ್ರದೇಶ, ಪಂಜಾಬ್ ರಾಜ್ಯ ಮತ್ತು ಚಂಡೀಘಡದ ಕೇಂದ್ರಾಡಳಿತ ಪ್ರದೇಶ |
| 8 | ವ್ಯವಸ್ಥಾಪಕ<br>ಭಾರತೀಯ ರಿಸರ್ವ್ ಬ್ಯಾಂಕ್. ಪ್ರಕಟಣಾ ಇಲಾಖೆ<br>ಫೋರ್ಟ್ ಗ್ಲೇಸಿಸ್ಗ್ ಸಂ. 16, ರಾಜಾಜಿ ಸಾಲೈ, ಅಂಚೆ ಪೆಟ್ಟಿಗೆ ಸಂ 40,<br>ಚೆನ್ನೈ – 600 001. | ತಮಿಳುನಾಡು ಮತ್ತು ಪಾಂಡಿಚೆರಿಯ ಕೇಂದ್ರಾಡಳಿತ ಪ್ರದೇಶ. |
| 9 | ವ್ಯವಸ್ಥಾಪಕ<br>ಭಾರತೀಯ ರಿಸರ್ವ್ ಬ್ಯಾಂಕ್, ಪ್ರಕಟಣಾ ಇಲಾಖೆ<br>ಸ್ಟೇಷನ್ ರಸ್ತೆ, ಪಾನ್ ಬಜಾರ್, ಅಂಚೆ ಪೆಟ್ಟಿಗೆ ಸಂ. 120<br>ಗುವಾಹಟಿ -781 001. | ಅಸ್ಸಾಂ, ಅರುಣಾಚಲ ಪ್ರದೇಶ, ಮಣಿಪುರ, ಮೇಘಾಲಯ, ಮಿಜೋರಾಮ್, ನಾಗಾಲ್ಯಾಂಡ್ ಮತ್ತು ತ್ರಿಪುರಾ ರಾಜ್ಯಗಳು |
| 10 | ವ್ಯವಸ್ಥಾಪಕ<br>ಪ್ರಕಟಣಾ ಇಲಾಖೆ<br>ಭಾರತೀಯ ರಿಸರ್ವ್ ಬ್ಯಾಂಕ್, 6-1-65,ಸಚಿವಾಲಯ ರಸ್ತೆ, ಸೈಫಾಬಾದ್, ಹೈದರಾಬಾದ್ -500 004. | ಆಂಧ್ರಪ್ರದೇಶ ರಾಜ್ಯ |
| 11 | ಉಪ-ವ್ಯವಸ್ಥಾಪಕ<br>ಭಾರತೀಯ ರಿಸರ್ವ್ ಬ್ಯಾಂಕ್, ಪ್ರಕಟಣಾ ಇಲಾಖೆ<br>ರೈಲ್ ಹೆಡ್ ಸಂಕೀರ್ಣ, ಜಮ್ಮು -180012. | ಜಮ್ಮು ಮತ್ತು ಕಾಶ್ಮೀರ ರಾಜ್ಯ |
| 12 | ವ್ಯವಸ್ಥಾಪಕ<br>ಪ್ರಕಟಣಾ ಇಲಾಖೆ<br>ಭಾರತೀಯ ರಿಸರ್ವ್ ಬ್ಯಾಂಕ್, ರಾಮ್ ಬಾಗ್ ರಸ್ತೆ, ಟಾಂಕ್ ರಸ್ತೆ, ಅಂಚೆ ಪೆಟ್ಟಿಗೆ, ಸಂ. 12, ಜೈಪುರ -302 004. | ರಾಜಸ್ಥಾನ ರಾಜ್ಯ |
| 13 | ವ್ಯವಸ್ಥಾಪಕ, ಪ್ರಕಟಣಾ ಇಲಾಖೆ<br>ಭಾರತೀಯ ರಿಸರ್ವ್ ಬ್ಯಾಂಕ್, ಎಂ.ಜಿ. ಮಾರ್ಗ, ಅಂಚೆ ಪೆಟ್ಟಿಗೆ ಸಂ 82/142<br>ಕಾನ್ಪುರ -208001. | ಉತ್ತರ ಪ್ರದೇಶ ಮತ್ತು ಉತ್ತರಾಂಚಲ ರಾಜ್ಯ |
| 14 | ವ್ಯವಸ್ಥಾಪಕ<br>ಪ್ರಕಟಣಾ ಇಲಾಖೆ<br>ಭಾರತೀಯ ರಿಸರ್ವ್ ಬ್ಯಾಂಕ್<br>ಅಂಚೆ ಪೆಟ್ಟಿಗೆ ಸಂ. 49,<br>ಕೊಲ್ಕತ್ತಾ – 700 001. | ಸಿಕ್ಕಿಂ, ಪಶ್ಚಿಮ ಬಂಗಾಳ ರಾಜ್ಯ ಹಾಗೂ ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳ ಕೇಂದ್ರಾಡಳಿತ ಪ್ರದೇಶ |
| 15 | ವ್ಯವಸ್ಥಾಪಕ<br>ಭಾರತೀಯ ರಿಸರ್ವ್ ಬ್ಯಾಂಕ್, ಪ್ರಕಟಣಾ ಇಲಾಖೆ ಮುಖ್ಯ ಕಟ್ಟಡ, ಡಾ. ರಾಘವೇಂದ್ರ ರಾವ್ ರಸ್ತೆ, ಅಂಚೆ ಪೆಟ್ಟಿಗೆ<br>15, ನಾಗರಿಕ ರಸ್ತೆ, ನಾಗ್ಪುರ- 440 001. | ಚತ್ತೀಸ್ ಘಡ ರಾಜ್ಯ ಮತ್ತು ಮಹಾರಾಷ್ಟ್ರ ರಾಜ್ಯದ ಅಕೋಲಾ, ಅಮರಾವತಿ, ಔರಂಗಾಬಾದ್, ಬೀಡ್, ಭಂಡಾರ, ಬುಲ್ದಾನಾ, ಚಂದ್ರಾಪುರ, ಡುಲೆ, ಗಚ್ಚಿರೋಲಿ, ಹಿಂಗೋಲಿ, ಜಲಗಾಂವ್, ಜಲ್ನಾ, ಲಾತೂರ್, ನಾಗಪುರ, ನಾಂದೇಡ್, ಒಸ್ಮಾನಾಬಾದ್, ಪರ್ಭಾನಿ, ವಾರ್ಧಾ, ಯವತ್ಮಾಲ್ |
| 16 | ವ್ಯವಸ್ಥಾಪಕ.<br>ಭಾರತೀಯ ರಿಸರ್ವ್ ಬ್ಯಾಂಕ್, ಪ್ರಕಟಣಾ ಇಲಾಖೆ<br>6, ಸಂಸದ್ ಮಾರ್ಗ, ನವ ದೆಹಲಿ – 110 001. | ದೆಹಲಿ ರಾಜ್ಯ |
| 17 | ಉಪ-ವ್ಯವಸ್ಥಾಪಕ,<br>ಭಾರತೀಯ ರಿಸರ್ವ್ ಬ್ಯಾಂಕ್<br>ಪ್ರಕಟಣಾ ಇಲಾಖೆ, ದಕ್ಷಿಣ ಗಾಂಧಿ ಮೈದಾನ<br>ಅಂಚೆ ಪೆಟ್ಟಿಗೆ ಸಂ. 162, ಪಾಟ್ನಾ – 800 001. | ಬಿಹಾರ ಮತ್ತು ಜಾರ್ಖಂಡ ರಾಜ್ಯ |
| 18 | ಉಪ-ವ್ಯವಸ್ಥಾಪಕ<br>ಭಾರತೀಯ ರಿಸರ್ವ್ ಬ್ಯಾಂಕ್<br>ಪ್ರಕಟಣಾ ಇಲಾಖೆ, ಬೇಕರಿ ಜಂಕ್ಷನ್<br>ಅಂಚೆ ಪೆಟ್ಟಿಗೆ ಸಂ. 6507, ತಿರುವನಂತಪುರಂ – 695033. | ಕೇರಳ ರಾಜ್ಯ ಮತ್ತು ಪಾಂಡಿಚೆರಿ ಕೇಂದ್ರಾಡಳಿತ ಪ್ರದೇಶ |